ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) ದಿನಾಂಕ 12-07-07 ರಂದು ನಾಲ್ಕನೇ ಪಟ್ಟಿಯ ಲಿಖಿಯ ಮೂಲಕ ಉತ್ತರಿಸುವ 40 ಪ್ರಶ್ನೆಗಳ ಪೈಕಿ 36 ಉತ್ತರಗಳನ್ನು ಮಂಡಿಸಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

ಶ್ರೀ ಸಿದ್ದು ಸವದಿ ಒಂದು ನಿಮಿಷದಲ್ಲಿ ಕೇಳುತ್ತೇನೆ ಅವಕಾಶ ಕೊಡಿ ಸರ್

ಅಧ್ಯಕ್ಷರು ಆಯಿತು ಕುಳಿತುಕೊಳ್ಳಿ, ಏನು ಮಾಡುವುದಕ್ಕೆ ಆಗುವುದಿಲ್ಲ ನಿಮಗೆ ಇಷ್ಟ ಬಂದ ಹಾಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ

ಶ್ರೀ ಸಿದ್ದು ಸವದಿ ಸಾಕಷ್ಟು ಬಾರಿ ಅವಕಾಶ ಕೊಟ್ಟಿದ್ದೀರಿ ದಯಮಾಡಿ ಒಂದು ಅವಕಾಶ ಕೊಡಿ

ಅಧ್ಯಕ್ಷರು ಈಗ ಅವಕಾಶ ಇಲ್ಲ ಒಂದು ಗಂಟೆಯಾಗ ಮೇಲೆ ನೀವು ಲೇಟಾಗಿ ಬಂದಿರಿ ಪ್ರಶ್ನೆಯೆಲ್ಲ ಲ್ಯಾಪ್ಸ್ ಆಯಿತು

ಶ್ರೀ ಸಿದ್ದು ಸವದಿ ಎರಡೆರಡು ಗಂಟೆಯಾಗಿದೆ, ಒಂದೇ ಒಂದು ನಿಮಿಷ ಅವಕಾಶ ಮಾಡಿಕೊಡಿ ನನ್ನದು ಬಹಳ ಮುಖ್ಯವಾದ ಪ್ರಶ್ನೆಯಿದೆ

ಅಧ್ಯಕ್ಷರು ದಯಮಾಡಿ ಸದಸ್ಯರು ಅರ್ಥ ಮಾಡಿಕೊಳ್ಳಿ ಬಿಎಸಿಯಲ್ಲಿ ತೀರ್ಮಾನವಾಗಿದೆ ಈಗಾಗಲೇ ಒಂದು ಗಂಟೆಯಾಯಿತು ಇಲ್ಲದಿದ್ದರೆ ರಿಪಿಟೇಷನ್ ಆಗುತ್ತದೆ ಪ್ರತಿ ದಿನ ಎರಡು ಗಂಟೆ ಮಾಡಬೇಕಾಗುತ್ತದೆ ಅದು ಸಾಧ್ಯವಾಗುವುದಿಲ್ಲ

ಶ್ರೀ ನೆ ಲ ನರೇಂದ್ರ ಬಾಬು ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಡಿ

ಶ್ರೀ ಜಿ ಎಸ್ ಗಡ್ಡದೇವರ ಮರ್ ನಮ್ಮ ಪ್ರಶ್ನೆ ಬರುವುದು ಅಪರೂಪ ನಮಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು ಈಗ ವರದಿ ಒಪ್ಪಿಸುವುದು

ಶ್ರೀ ನೆ ಲ ನರೇಂದ್ರ ಬಾಬು ನಮ್ಮ ಮೇಲೆ ಏನು ಕರುಣೆಯಿಲ್ಲವಲ್ಲ

2) ವರದಿ ಒಪ್ಪಿಸುವುದು

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಅಧ್ಯಕ್ಷರು ಸಾರ್ವಜನಿಕ ಉದ್ಯಮಗಳ ಸಮಿತಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ 115 ನೇ ವರದಿಯನ್ನು ಸಮಿತಿಯ ಪರವಾಗಿ ದಿನಾಂಕ 12–07–2007 ರಂದು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

ವಿಷಯ ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 115ನೇ ವರದಿ

ಅಧ್ಯಕ್ಷರು ಈಗ ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಸ್ವಲ್ಪ ಎಲ್ಲರೂ ಕುಳಿತುಕೊಳ್ಳಿ

ಶ್ರೀ ನೆ ಲ ನರೇಂದ್ರ ಬಾಬು: ಸ್ವಾಮಿ ಎರಡು ಪ್ರಶ್ನೆಯಿದೆ ಕೇಳಿ ಬಿಡುತ್ತೇವೆ ಅವಕಾಶ ಮಾಡಿಕೊಡಿ ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಸಹಾಯಕ್ಕೆ ಬರಬೇಕು ನಮಗೆ ಅವಕಾಶ ಮಾಡಿಕೊಡಿ

ಶ್ರೀ ಜಿ ಎಸ್ ಗಡ್ಡದೇವರ ಮರ ಐದು ನಿಮಿಷ ಲೇಟಾಗಿ ಬಂದೆವು ನಮಗೆ ದಯವಿಟ್ಟು ಅವಕಾಶ ಕೊಡಿ

(ಗೊಂದಲ)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಬೇಕು

(ಗೊಂದಲ)